ಯಾರು, ಏನು? ಅಂತ ಈವರೆಗೆ ಕೇಳದೇ ಇಷ್ಟೊಂದು ಆದರಿಸುತ್ತಿದ್ದಾನಲ್ಲ. ಏನಿರಬಹುದು ಇದರ ಹಿಂದಿನ ಮರ್ಮ? ಅಪರಿಚಿತ ಬಂದರೆ ಮನೆಯೊಳಗಿರಲಿ, ಗೇಟಿನೊಳಕ್ಕೆ ಬಿಟ್ಟುಕೊಳ್ಳದ ಶಹರದವರಿಗೆ ತದ್ವಿರುದ್ಧ ಇವರ ನಡವಳಿಕೆ. ನಮ್ಮ ಮನಸ್ಸನ್ನು ಓದಿಕೊಂಡವರಂತೆ ವರ್ತಿಸುತ್ತಾರೆ. ಈವರೆಗೆ ಕಾಡಿನಲ್ಲಿರಲಿ, ನಾಡಿನಲ್ಲಿರಲಿ ಯಾರೂ ತೋರದ ಪ್ರೀತಿಯನ್ನು ತೋರಿಸುತ್ತಿದ್ದಾರೆ. ಏನಿದ್ದೀತು ಇದರ ಹಿಂದಿನ ಬೇತು?' ಎಂದುಕೊಂಡ.

ತಂಬಾಕಿನ ಸಹಿತ ಕವಳ ಹಾಕಿಕೊಂಡ ಮೂರ್ತಿರಾಯರು ಕುಳಿತಲ್ಲೇ, 'ನಿಮ್ಮ ಅನುಮಾನ ಸರಿ, ನಾನೇ ಕೇಳಲಿಲ್ಲ. ಆಭಾಸವಾದೀತು ಅಂತ. ನಾಗರಿಕತೆ ಬೆಳೆದಂತೆ ವ್ಯಕ್ತಿ ಪ್ರಾಧಾನ್ಯತೆ ಹೆಚ್ಚಾಗುತ್ತ ಬಂದ ಪರಿಣಾಮ ಪರಸ್ಪರ ಪರಿಚಯವೇ ಮುಖ್ಯ ಎನ್ನುವ ಮನೋಭಾವ ಹುಟ್ಟಿಕೊಂಡಿತು. ನೀವು ನನ್ನಲ್ಲಾಗಲೀ, ನಾನು ನಿಮ್ಮಲ್ಲಾಗಲೀ ಶಬ್ದಗಳ ಮೂಲಕ ಪರಿಚಯಿಸಿಕೊಂಡರೂ ಕೊನೆಗೂ ಸಿಕ್ಕುವುದು ಈಗ, ನಾವಿದ್ದೇವಲ್ಲ ಇದೇ ಪರಿಚಯವೇ' ಎಂದಾಗ ಸಂತೋಷ ತಬ್ಬಿಬ್ಬಾಗಿಬಿಟ್ಟ.

ಆವರಿಸಿಕೊಳ್ಳುತ್ತಿದ್ದ ಜೊಂಪು ಒಮ್ಮೆಲೆ ಹಾರಿಹೋಗಿತ್ತು. ಆ ಶಾಕ್ ಅನ್ನು ನಿವಾರಿಸಿಕೊಳ್ಳುವ ಪ್ರಯತ್ನವಾಗಿ ಆ ಮಾತುಗಳಿಗೆ, ತಾನು ಧ್ವನಿಸದಿದ್ದ ಅನಿಸಿಕೆಯನ್ನು, ಅದಕ್ಕೆ ಮೂರ್ತಿರಾಯರು ಉತ್ತರ ಕೊಟ್ಟದ್ದನ್ನು ಮನೀಷನಿಗೆ ಇಂಗ್ಲಿಷ್‌ನಲ್ಲಿ ವಿವರಿಸಿದ. ಮನೀಷನಿಗೆ ಎಷ್ಟು ಅರ್ಥವಾಯಿತೋ? ಆದರೂ ಮಾತುಗಳ ಒಳಭಾವ ಅವನನ್ನು ತಟ್ಟಿತ್ತು.

ಚಾಪೆಯ ಮೇಲೆ ಹಾಸಿದ ಕಂಬಳಿ, ಹೊದೆಯುವ ಚಾದರದ ಮೇಲೆ ದಪ್ಪನೆಯ ಕಂಬಳಿ. ಹೊದ್ದು ಮಲಗಿದ ತುಸು ಹೊತ್ತಿಗೇ ನಿದ್ದೆ ಅವರಿಬ್ಬರನ್ನೂ ಕವಿದುಕೊಂಡು ಬಂದಿತ್ತು. ಬಾಹ್ಯ ಜಗತ್ತಿನ ಯಾವ ಕ್ಲೇಶಗಳೂ ತಟ್ಟದ, ಸ್ವಪ್ನಗಳು ಕಾಡದ ಸಂತುಷ್ಟ ನಿದ್ದೆ. ಅದರ ಗಾಢತೆ ಕಮ್ಮಿಯಾಗುತ್ತ ಬಂದಂತೆ ಸಂತೋಷನಿಗೆ ಮೂರ್ತಿರಾಯರು ಏನನ್ನೋ ಹೇಳುತ್ತಿರುವುದು ಕೇಳಿಸಿತು.

ಅರೆಘಳಿಗೆಯಲ್ಲಿ ಅವರೇ ಎದುರು ಬಂದು ಸ್ಪಷ್ಟವಾಗಿ ಕಂಡರು. 'ನಿಮಗೆ ನನ್ನ ಕುರಿತಾಗಿ ಹುಟ್ಟಿದ ಯೋಚನೆಗಳು ಸರಿಯೇ? ಅಪರಿಚಿತರ ಕುರಿತಾಗಿ ಸಹಜವಾಗಿ ಬರುವಂಥದ್ದು. ನನಗೆ ನೀವೇ ಅಂತ ಅಧಿಕೃತವಾಗಿ ಗೊತ್ತಿರದಿದ್ದರೂ ಯಾರೋ ಇಬ್ಬರು ಕಾಡಿನಲ್ಲಿ ದಿಕ್ಕು ತಪ್ಪಿದ್ದಾರೆ, ಹೇಗೋ ಇಲ್ಲಿಗೆ ಬಂದು ತಲುಪುತ್ತಾರೆ ಎನ್ನುವ ಅಸ್ಪಷ್ಟ ಸೂಚನೆ ಲಭಿಸಿತ್ತು. ಹಾಗಾಗಿ, ನಿಮ್ಮ ಕುರಿತು ಅಗತ್ಯವಿದ್ದುದನ್ನು ಮೊದಲೇ ಸಿದ್ಧಗೊಳಿಸಿಕೊಂಡಿದ್ದೆ' ಎನ್ನುತ್ತಿರುವಂತೆಯೇ ಯಾವುದೋ ಸದ್ದಾದಂತಾಗಿ ಸಂತೋಷ ಎಚ್ಚರಗೊಂಡ. ಜಗಲಿಯಲ್ಲಿ ಮಸುಕಾಗಿ ಉರಿಯುತ್ತಿದ್ದ ಲಾಂದ್ರ ಕಂಡಿತು. 'ಅರೆ, ಈವರೆಗೆ ಕಂಡದ್ದು ನಿಜವಲ್ಲ, ಕನಸು' ಎಂದು ಗಾಬರಿಯಿಂದ ಎದ್ದು ಕುಳಿತ. ಒಳಗಿನಿಂದ ತುಸು ಕಾಂತಿಯುಕ್ತವಾದ ಬೆಳಕು ಬಾಗಿಲಿಂದ ತೂರಿಬರುತ್ತಿತ್ತು. ಒಳಗಿನ ತಹತಹ ತಡೆಯಲಾಗದೇ ಎದ್ದು ಕೂತು ಪಕ್ಕಕ್ಕೆ ನೋಡಿದ. ಮಸುಕು ಬೆಳಕಿನ ಆ ಜಗಲಿಯ ಒಂದು ತುದಿಯಲ್ಲಿ ಕ್ಷೀಣವಾಗಿ ಬೆಳಕು ಚೆಲ್ಲುತ್ತಿದ್ದ ಲಾಂದ್ರ ನೇತಾಡುತ್ತಿತ್ತು. ಆ ಬೆಳಕಿನಲ್ಲಿ ಪದ್ಮಾಸನದಲ್ಲಿ ತನ್ಮಯರಾಗಿ ಕುಳಿತ ಮೂರ್ತಿರಾಯರು ಕಂಡರು. ಅವರು ಕುಳಿತ ಭಂಗಿಯೇ ವಿಶಿಷ್ಟವಾಗಿತ್ತು. ಚಿಕ್ಕಂದಿನಲ್ಲಿ ಶಾಲೆಯ ಪುಸ್ತಕಗಳಲ್ಲಿ, ಚಂದಮಾಮ, ಬಾಲಮಿತ್ರಗಳಲ್ಲಿ ನೋಡುತ್ತಿದ್ದ ಋಷಿ ಮುನಿಗಳ ಚಿತ್ರಗಳ ನೆನಪಾಯಿತು. ಸಂತೋಷನಿಗೆ ಅಪರ ರಾತ್ರಿಯಲ್ಲಿ ಈ ಜಗತ್ತಿನ ಹಂಗಿಲ್ಲದವರಂತೆ ಧ್ಯಾನಿಸುತ್ತ ಕುಳಿತ ಅವರನ್ನು ಕಂಡದ್ದೇ ಆಶ್ಚರ್ಯ, ಕೌತುಕಗಳೆಲ್ಲ ಬೆರೆತ ಮಿಶ್ರಭಾವವನ್ನು ಹುಟ್ಟಿಸಿ ಸಣ್ಣಗೆ ನಡುಗಿ, ತಿರುಗಿ ಮುಸುಕೆಳೆದು ಮಲಗಿಬಿಟ್ಟ.

ಹೊರಗಡೆ ಮಳೆ, ಗಾಳಿಯ ಅಬ್ಬರ ಹೆಚ್ಚಾಗತೊಡಗಿದ್ದು ಮಲಗಿದ್ದಲ್ಲೇ ಸಂತೋಷನಿಗೆ ತಟ್ಟತೊಡಗಿತ್ತು. ಮನೀಷ ಈ ಯಾವುದರ ಪರಿವೆ ಇಲ್ಲದೇ ಸುಖ ನಿದ್ರೆಯಲ್ಲಿದ್ದ. ಅವನ ಬಗ್ಗೆ ಯಾಕೋ ಮತ್ತಷ್ಟು ಪ್ರೀತಿ ಉಕ್ಕಿತು. ಅದರ ನಡುವೆಯೇ 'ಈ ಮೂರ್ತಿರಾಯ ಯಾರು? ಇವನ